ನಷ್ಟವಾಗುತ್ತದೆ. ಈ ವಿಷಯವನ್ನು ಆತೀ ಪ್ರಾಮುಖ್ಯವು ಬರಗಾಲ ನಿವಾರಣೆಯು ಕಾಮಗಾರಿಯು ಕೆಲಸವಾಗಿರುವುದರಿಂದ ಇದನ್ನು ತುರ್ತಾಗಿ ಮಾಡಿಸುವಂತೆ ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

(೩) ಕುಶಾಲನಗರದಲ್ಲಿ ಬಸ್ ಸ್ಟಾಂಡ್ ಕಟ್ಟಡವನ್ನು ಪೂರ್ತಿಗೊಳಿಸದಿರುವುದು

ಶ್ರೀ ಡಿ.ಎ. ಚಿನ್ನಪ್ಪ (ಪಿಡಿಕೇರಿ).—ಮಾನ್ಯ ಅಧ್ಯಕ್ಷರೇ, ಸುಮಾರು ೭ ವರ್ಷಗಳ ಹಿಂದೆ ಪ್ರಾರಂಭವಾದ ಕುಶಾಲನಗರ ಬಸ್ ನಿಲ್ದಾಣದ ಕಟ್ಟಡ ಈತನಕ ಕಾಲು ಭಾಗ ಆಗಿಲ್ಲ. ಈಗ ಅದರ ಕೆಲಸ ಸಂಪೂರ್ಣ ನಿಂತುಹೋಗಿದೆ ಅದರ ಕಂಟ್ರಾಕ್ಟರ್ ಎಲ್ಲಿರುವನೆಂದು ತಿಳಿದು ಬರುವುದಿಲ್ಲ. ಪ್ರಯಾಣಿಕರಿಗೆ ಇದರಿಂದ ಸಹಿಸಲಾಗದಷ್ಟು ಅನಾನುಕೂಲವಾಗಿದೆ. ಅಷ್ಟೇ ಅಲ್ಲದೆ ಕುಶಾಲನಗರಕ್ಕೆ ಬರುವ ಬಹುಪಾಲು ಬಸ್‌ಗಳನ್ನು ರಸ್ತೆಯಲ್ಲೇ ನಿಲ್ಲಿಸುವ ಪ್ರಸಂಗ ಬಂದಿದೆ, ಎಲ್ಲಾ ವರ್ಗದವರಿಗೆ ದಿನನಿತ್ಯದ ಸಮಸ್ಯೆಯಾಗಿದೆ ಇದನ್ನು ಕೂಡಲೇ ಪೂರ್ಣ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಮಂತ್ರಿಗಳು).—ಅಧ್ಯಕ್ಷರೇ, ಕುಶಾಲನಗರದಲ್ಲಿ ಸಾರಿಗೆ ನಿಗಮದ ಬಸ್ ನಿಲ್ದಾಣಕ್ಕಾಗಿ ೧೯೭೯-೮೦ನೇ ಸಾಲಿನಲ್ಲಿ ೮.೨೨ ಲಕ್ಷ ರೂಪಾಯಿಗಳ ಅಂದಾಜುಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಈ ಕಾರ್ಯವನ್ನು ನಿರ್ವಹಿಸಲು ಟೆಂಡರ್‌ಗಳನ್ನು ಕರೆದು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿತ್ತು. ನಿರ್ಮಾಣ ಕಾರ್ಯ ದಿನಾಂಕ ೧೦-೧೧-೮೦ರಲ್ಲಿ ಪ್ರಾರಂಭವಾಯಿತು. ಬಸ್‌ನಿಲ್ದಾಣದ ಅಡಿಪಾಯ ಕಾರ್ಯಪ್ರಗತಿಯಲ್ಲಿ ಇದ್ದಾಗ ನಿರ್ಮಾಣ ಕಾರ್ಯದ ಭಾಗದಲ್ಲಿ ಕಲ್ಯಾಣಿ ಇರುವುದು ಕಂಡು ಬಂದಿತು. ಬಸ್‌ನಿಲ್ದಾಣ ಕಾರ್ಯವನ್ನು ಕಲ್ಯಾಣಿ ಬರುವ ಜಾಗವನ್ನು ಬಿಟ್ಟು ಸ್ಥಳಾಂತರಿಸಲಾಯಿತು ಹಾಗೂ ಈ ಸ್ಥಳಕ್ಕೆ ಸರಿಹೊಂದುವಂತೆ ನಕ್ಷೆಯನ್ನು ಮಾರ್ಪಡಿಸಲಾಯಿತು. ಇದಾದನಂತರ ದಿನಾಂಕ ೫.೮-೮೧ರಲ್ಲಿ ಪುನಃ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಗುತ್ತಿಗೆದಾರರು ಬಸ್‌ನಿಲ್ದಾಣದ ಹಾಗೂ ಉಪ ಕೆಲಸಗಳ ಶೇಕಡ ೭೦ರಷ್ಟು ಭಾಗವನ್ನು ಪೂರ್ಣಗೊಳಿಸಿ, ಸದರೀ ಕೆಲಸಗಳನ್ನು ಪೂರ್ಣಗೊಳಿಸಲು ಹೆಚ್ಚಿನ ದರಗಳನ್ನು ನೀಡಬೇಕೆಂದು ಕೋರಿಕೆಯನ್ನು ಸಲ್ಲಿಸಿ ಕೆಲಸವನ್ನು ಸ್ಥಗಿತಗೊಳಿಸಿದರು. ಅದರ ಕೆಲವು ಬೇಡಿಕೆಗಳು ಸಮಂಜಸವಾಗಿದ್ದುದರಿಂದ ಈ ಆಧಾರದ ಮೇಲೆ ನಿರ್ಮಾಣ ಕೆಲಸವನ್ನು ಪುನರಾರಂಭಿಸಲು ಕೇಳಲಾಯಿತು. ಹಲವಾರು ತಿಳುವಳಿಕೆ ಗಳನ್ನು ನೀಡಿದರೂ ಸಹ ನಿರ್ಮಾಣ ಕೆಲಸ ಪ್ರಾರಂಭಿಸಲಿಲ್ಲ. ಈ ಗುತ್ತಿಗೆಯನ್ನು ಜನವರಿ ೮೭ರಲ್ಲಿ ರದ್ದುಗೊಳಿಸಲಾಯಿತು. ಮತ್ತು ಈಗ ಮತ್ತೊಂದು ಗುತ್ತಿಗೆದಾರರಿಗೆ ಕೆಲಸ ವಹಿಸಿ ಮೂರು ತಿಂಗಳೊಳಗೆ ನಿರ್ಮಾಣ ಕಾರ್ಯವನ್ನು ಮುಕ್ತಾಯಗೊಳಿಸಲು ನಿರ್ಧರಿಸಲಾಗಿದೆ.

(೪) ಶಾಲಾ ಕಾಲೇಜುಗಳಲ್ಲಿ ಯೋಗಾಭ್ಯಾಸವನ್ನು ಬೋಧಿಸುವ ಬಗ್ಗೆ

ಶ್ರೀ ಎಸ್.ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ಈಗಿರುವ ಶಿಕ್ಷಣ ಪದ್ಧತಿಯಲ್ಲಿ ಎಲ್ಲ ಸಾರ್ವಜನಿಕ ಶಾಲಾ ಕಾಲೇಜುಗಳಲ್ಲಿ ಭಾರತೀಯ ಯೋಗಾಭ್ಯಾಸವನ್ನು ಬೋಧಿಸುತ್ತಿಲ್ಲ, ನನ್ನ ತಿಳುವಳಿಕೆ ಯಂತೆ ನಮ್ಮ ದೇಶದಲ್ಲಿ ಯಾವುದೇ ಸಾರ್ವಜನಿಕ ವಿದ್ಯಾ ಸಂಸ್ಥೆಯಲ್ಲಿ ಯೋಗಾಭ್ಯಾಸವನ್ನು ಬೋಧಿಸುತ್ತಿರುವುದಿಲ್ಲ. ವಿದ್ಯಾರ್ಥಿಗಳ ಪರಿಪೂರ್ಣ ಅಭಿವೃದ್ಧಿಗಾಗಿ ಯೋಗಾಭ್ಯಾಸವನ್ನು ಬೋಧಿಸಿದಲ್ಲಿ ಅವರ ದೈಹಿಕ ಬೆಳವಣಿಗೆಯೊಂದಿಗೆ ಮಾನಸಿಕ ಮತ್ತು ನೈತಿಕ ಬೆಳವಣಿಗೆಗಳು ಸಾಧಿಸಿದಂತಾಗಿ ಮಕ್ಕಳಲ್ಲಿ ಚಾರಿತ್ರಿಕ ನೆಲೆಗಟ್ಟು ಭದ್ರಗೊಳಿಸಿದಂತಾಗುವುದು. ಯಾವುದೇ ಪರಿಸರದಲ್ಲಿ ಮನುಷ್ಯನ ಮಾನಸಿಕ ಹಾಗೂ ದೈಹಿಕ ಸಮತೋಲನೆಯನ್ನು ಕಾಪಾಡಿಕೊಳ್ಳುವಲ್ಲಿ ಭಾರತೀಯ ಯೋಗಾಭ್ಯಾಸಕ್ಕಿರುವ ಮಹತ್ವವು ವಿದೇಶಗಳಲ್ಲಿ ಕೂಡಾ ಪ್ರಖ್ಯಾತವಾಗಿದೆ.

ಕರ್ನಾಟಕ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಭಾರತೀಯ ಯೋಗಾಭ್ಯಾಸವನ್ನು ಪಠ್ಯ ವಿಷಯ ವನ್ನಾಗಿ ಜಾರಿಗೊಳಿಸಬೇಕಾಗಿ ಮಾನ್ಯ ಶಿಕ್ಷಣ ಮಂತ್ರಿಯವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಡಿ. ಪುಂಜುನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಪ್ರಸಕ್ತ ಪ್ರೌಢಶಾಲೆ ಗಳಲ್ಲಿ ಜಾರಿಯಲ್ಲಿರುವ ಶಾರೀರಿಕ ಶಿಕ್ಷಣ ಪಠ್ಯ ವಿಷಯದಲ್ಲಿ ೮ ರಿಂದ ೧೦ನೇ ತರಗತಿಯವರೆಗೆ ಯೋಗಾಸನಗಳ ವಿಷಯ ಸೇರ್ಪಡೆಯಾಗಿದೆ. ಆದರೆ ಪ್ರತ್ಯೇಕವಾಗಿ ಯೋಗಾಸನವೇ ಒಂದು ಕಡ್ಡಾಯ ವಿಷಯವಾಗಿಲ್ಲ.